SRI QAMARUL ISLAM : Where there is a bre well, there is no current. ಅದರ ಬಗ್ಗೆ ಕೂಡ ಆಶ್ವಾಸನೆ ಕೊಡಬೇಕು.

MR. SPEAKER : I have already stated, Half an hour discussion ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೇನೆ. ಮತ್ತೆ ಕೇಳುವುದರಲ್ಲಿ ಏನರ್ಥ? ಲಾಲಾಜಿ ಆರ್. ಮೆಂಡನ್‌ರವರು ಪ್ರಶ್ನೆಯನ್ನು ಕೇಳಿ.

ಪ್ರಶ್ನೆ ಸಂಖ್ಯೆ 95 (573)

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಜಮಖಂಡಿ ತಾಲ್ಲೂಕಿನ ಆಲಗೂರ ಗ್ರಾಮಕ್ಕೆ ಕುಡಿಯುವ ನೀರು ಒದಗಿಸುವ ಬಗ್ಗೆ

96 (163) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನ ಆಲಗೂರ ಗ್ರಾಮದ ಗಡ್ಡೀ ಜಮೀನುಗಳು ಕೃಷ್ಣಾ ದಡದಲ್ಲಿದ್ದರೂ ಶುದ್ಧವಾದ ಕುಡಿಯುವ ನೀರಿನ ಸಮಸ್ಯೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕೃಷ್ಣಾ ನದಿಯ ಎಡಭಾಗದಲ್ಲಿರುವ ತೊದಲ ಬಾಗಿ ಕೆರೆಯ ಹತ್ತಿರ ಬೋರು ಹಾಕಿ ನೀರು ಪೈಪ್‌ಲೈನ್ ಮೂಲಕ ತರುವುದರಿಂದ ಕುಡಿಯುವ ನೀರಿನ ಈ ಸಮಸ್ಯೆಗೆ ಪರಿಹಾರವನ್ನು ಕಂಡು ಹಿಡಿಯಲು ಸರ್ಕಾರ ತೀರ್ಮಾನಿಸುವುದೇ?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಬಂದಿದೆ.

ಆ) ಆಲಗೂರ ಗ್ರಾಮಕ್ಕೆ ಹಾಲಿ ಕೃಷ್ಣ ನದಿಯಿಂದ ಕುಡಿಯುವ ನೀರು ಸರಬರಾಜು ಮಾಡುತ್ತಿರುವ ಪೈಪ್‌ಲೈನ್ ವಿಸ್ತರಿಸಿ ಆಲಗೂರು ಗಡ್ಡಿ ಜಮೀನು (ತಾಂಡ)ಗಳಿಗೆ 2009–10ನೇ ಸಾಲಿನ ಡಿ.ಡಿ.ಪಿ. ಯೋಜನೆಯಡಿ

ರೂ.10.00 ಲಕ್ಷ ಅಂದಾಜು ಮೊತ್ತದಲ್ಲಿ ಕುಡಿಯುವ ನೀರು ಪೂರೈಕೆ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಡಲಾಗಿದೆ. ಆಲಗೂರ ಗ್ರಾಮ ಸುಮಾರು 8–10 ಸಾವಿರ ಜನಸಂಖ್ಯೆ ಇರುವಂತಹ ಗ್ರಾಮವಾಗಿರುವುದರಿಂದ ಈಗ ಪೂರೈಕೆಯಾಗುತ್ತಿರುವಂತಹ ನೀರು ಆ ಗ್ರಾಮಕ್ಕೆ ಸಾಕಾಗುತ್ತಿಲ್ಲ. ತಮ್ಮ ಜಮೀನಿನ ಗಡ್ಡೀ ಪ್ರದೇಶದಲ್ಲಿ ವಾಸ ಮಾಡತಕ್ಕಂಥ ಜನರಿಗೆ ಶುದ್ಧವಾದಂತಹ ಕುಡಿಯುವ ನೀರು ಸಿಗುತ್ತಿಲ್ಲ. ಒಂದೆರಡು ಕಿಲೋಮೀಟರ್ ಹೋಗಿ ಸೈಕಲ್ ಮೇಲೆ ನೀರು ತರುವಂತಹ ಪರಿಸ್ಥಿತಿ ಇದೆ. ಹೀಗಾಗಿ ಅದರಿಂದ ನೀರು ಕೊಡದೇ ಆ ನದಿ ಎಡ ಭಾಗದಲ್ಲಿ ತೊದಲಬಾಗಿ ಹತ್ತಿರ ಒಂದು ದೊಡ್ಡ ಕೆರೆ ಇದೆ. ಕೆರೆ ಪಕ್ಕ ಮಡ್ಡಿ ಪ್ರದೇಶದಲ್ಲಿ ಒಂದು ಬೋರ್ ಹಾಕಿದರೆ ಶುದ್ಧವಾದಂತಹ ರುಚಿಯಾದಂತಹ ನೀರು ಸಿಗುತ್ತದೆ. ಆ ನೀರನ್ನು lift ಮಾಡಿ ಈ ಕಡೆ ತಂದು ಬಿಟ್ಟರೆ ಶಾಸ್ವತವಾದಂತಹ ವ್ಯವಸ್ಥೆ ಮಾಡಿದ ಹಾಗೆ ಆಗುತ್ತದೆ. ಅದನ್ನು ಮಾನ್ಯ ಮಂತ್ರಿಗಳು ಮಾಡುವುದಕ್ಕೆ ಇಚ್ಛೆ ಪಡುತ್ತಾರೆಯೇ ಹೇಗೆ ಎಂದು ಕೇಳುವುದರಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಶ್ರೀಕಾಂತ್ ಕುಲಕರ್ಣಿಯವರು ಏನು ಪ್ರಶ್ನೆಯನ್ನು ಕೇಳಿದ್ದಾರೆ, ಅದರಲ್ಲಿ ಮುಖ್ಯವಾಗಿ ಅವರ ಉದ್ದೇಶ ಇರುವಂಥದ್ದು, ಆಲಗೂರ ಗ್ರಾಮದ ಗಡ್ಡೀ ಜಮೀನುಗಳಲ್ಲಿ ತಾಂಡಗಳು ಇವೆ, ಇಲ್ಲಿ ಕುಡಿಯುವ ನೀರಿನ ಯೋಜನೆ ಜಾರಿಗೆ ತರಬೇಕು, ಅದನ್ನು ಆಲಗೂರ ಗ್ರಾಮದ ಮುಖಾಂತರ ಅಲ್ಲದೆ ತೊದಲಬಾಗಿ ಎಂದು ಏನು ಒಂದು ಗ್ರಾಮವಿದೆ, ಅದರ ಮುಖಾಂತರ ಪೈಪ್ ಲೈನ್ ಹಾಕಿ ತರಬೇಕೆನ್ನುವ ವಿಚಾರವನ್ನು ಹೇಳಿದರು. ಈ ಆಲಗೂರ ಗ್ರಾಮದಿಂದ ಪೈಪ್‌ಲೈನ್ ಜೋಡಣೆ ಮಾಡಿಕೊಂಡು ಈ ಆಲಗೂರ ಗಡ್ಡೀ ಜಮೀನು ತಾಂಡಗಳಿಗೆ ನೀರು ಪೂರೈಕೆ ಮಾಡಬೇಕೆನ್ನುವ ಯೋಜನೆ ಸರ್ಕಾರದ ಮಟ್ಟದಲ್ಲಿದೆ. ಅದರ ಮುಖಾಂತರ ನಾವು ನೀರನ್ನು ಒದಗಿಸುವ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳುತ್ತೇವೆ. ತೊದಲಬಾಗಿ ನೀರು ತರಬೇಕೆಂದು ಅವರು ಸಲಹೆ ಕೊಡುತ್ತಿದ್ದಾರೆ, ಅಲ್ಲಿಂದ ನೀರು ತರುವಂತೆ ಮಾಡಿದರೆ cost ಜಾಸ್ತಿಯಾಗುತ್ತದೆಂದು ನಮಗೆ ಮಾಹಿತಿ ಇದೆ. ಹೀಗಾಗಿ ಆ ದೃಷ್ಟಿಯಿಂದ

ಮಾನ್ಯ ಸದಸ್ಯರು ಹೇಳಿದಂತೆ ಗಡ್ಡೀ ಜಮೀನು ತಾಂಡಗಳು ಏನಿವೆ ಅದಕ್ಕೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಆಲಗೂರ ಗ್ರಾಮದಿಂದ ಮಾಡುತ್ತೇವೆಂದು ನಾನು ಉತ್ತರದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ : ಈ ವಸತಿ ಪ್ರದೇಶದಲ್ಲಿ ಇರುವಂತಹ ಜನರಿಗೆ ನೀರು ಕೊಡುವುದಕ್ಕೆ ಸಾಧ್ಯವಿಲ್ಲ. ಬಹಳ ಖರ್ಚು ಬರುವುದಿಲ್ಲ, ಆದ್ದರಿಂದ ತೊದಲಬಾಗಿಯಿಂದ ನೀರನ್ನು ತರುವುದು ಸರಿಯೆಂದು ನನ್ನ ಅಭಿಪ್ರಾಯ. ಆದುದರಿಂದ ಅದರ ಬಗ್ಗೆ ದಯವಿಟ್ಟು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ಅವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ನಾವು ಇದರ ಬಗ್ಗೆ ಅಧಿಕಾರಿಗಳಿಗೆ instruction ಕೊಟ್ಟು, ನಮಗೆ ಇರವಂತಹ ಮಾಹಿತಿ ಪ್ರಕಾರ ಆಲಗೂರ ಗ್ರಾಮದಿಂದ ಮಾಡಿದರೆ feasible ಆಗುತ್ತದೆಂದು report ಇದೆ. ನಾವು ಅದನ್ನು adopt ಮಾಡುತ್ತಿದ್ದೇವೆ. ಇನ್ನು ತೊದಲಬಾಗಿ ಯಿಂದ ನೀರು ತರುವ ಬಗ್ಗೆ ಹೇಳುತ್ತಿದ್ದಾರೆ. ಅಲ್ಲಿಂದ ನೀರು ತಂದರೆ ಎಷ್ಟು cost ಬರುತ್ತದೆ, ಅದು feasibility ಇದೆಯೋ ಇಲ್ಲವೋ ಎನ್ನುವುದರ ಬಗ್ಗೆ ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟು study ಮಾಡಿ ವರದಿ ಕೊಡಿ ಎಂದು ಹೇಳುತ್ತೇನೆ. ಅದರಲ್ಲಿ ಯಾವುದು ಸರಿಯಿದೆ ಎನ್ನುವುದನ್ನು ನೋಡಿಕೊಂಡು we will take a decision.

ಸಂಡೂರು ತಾಲ್ಲೂಕಿನಲ್ಲಿ ಮುಖ್ಯೋಪಾಧ್ಯಾಯರ ಹಾಗೂ ಶಿಕ್ಷಕರ ಕೊರತೆ ಇರುವ ಬಗ್ಗೆ

97 (779) ಶ್ರೀ ತುಕಾರಾಮ್. ಇ (ಸಂಡೂರ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂಡೂರು ತಾಲ್ಲೂಕಿನಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಮುಖ್ಯೋಪಾಧ್ಯಾಯರ ಹಾಗೂ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಸಂಖ್ಯೆ ಎಷ್ಟು (ವಿವರಗಳನ್ನು ಒದಗಿಸುವುದು);